**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿಂದಗಿ**

**ಸಿ.ಸಿ.ನಂ.7018/2022**

**ಫಿರ್ಯಾದಿದಾರ :** ಸರ್ಕಾರದ ಪರವಾಗಿ
ದೇವರ ಹಿಪ್ಪರಗಿ ಪೋಲೀಸ್‌ರು

**ವಿರುದ್ಧ**

**ಆರೋಪಿತರು :** 1. ಮಲ್ಲಿಕಾರ್ಜುನ ಶಿವರುದ್ರಪ್ಪ ಬಿರಾದಾರ
ವಯಸ್ಸು : 21 ವರ್ಷ
ಸಾ: ಗುಂದಗಿ

- - -

**ಆರೋಪಣೆ**

ಶ್ರೀ.ಮಹಾಂತೇಶ ಭೂಸಗೋಳ., ಬಿ.ಎ. (ಲಾ) ಎಲ್ ಎಲ್ ಬಿ., **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿಂದಗಿ** ಆದ ನಾನು, ಈ ಮೂಲಕ

1. ಮಲ್ಲಿಕಾರ್ಜುನ ಶಿವರುದ್ರಪ್ಪ ಬಿರಾದಾರ
ವಯಸ್ಸು : 21 ವರ್ಷ
ಸಾ: ಗುಂದಗಿ

- - - -

**ಆರೋಪಿತನಾದ ನಿನ್ನ ಮೇಲೆ ಹೊರಿಸಲಾದ** ಆರೋಪಣೆ ಏನೆಂದರೆ :

ದಿನಾಂಕ 25-08-2022 ರಂದು 16.30 ಗಂಟೆಗೆ ಆರೋಪಿತನಿಗೆ ಸೇರಿದ ಹುಡ್ಯೈ ವೆನ್ಯೂ ಕಾರ ನಂಬರ ಕೆಎ/28/ಜೆಡ್/4186 ನೇದ್ದರ ಚಾಲಕನಿದ್ದು, ವಿಜಯಪೂರ ಕಡೆಯಿಂದ ಸಿಂದಗಿ ಕಡೆಗೆ ರಸ್ತೆ ಮೇಲೆ ಜೊರಾಗಿ ಓಡಿಸಿಕೊಂಡು ಹೋಗಿ ಮುಂದೆ ನಿಯಂತ್ರಣ ಮಾಡಲಾಗದೇ ರಸ್ತೆ ಬದಿಯಲ್ಲಿ ಬಸ್ ನಿಲ್ದಾಣದ ಹಡೆಗೆ ತನ್ನ ಎಡಗಡೆ ಸೈಡನಲ್ಲಿ ಹಾದು ಹೊರಟಿರುವ ಚಾ ಸಾ 4 ರವರಿಗೆ ನೀನು ಕಾರನ್ನು ಹಿಂದಿನಿಂದ ಡಿಕ್ಕ ಹೊಡೆದು ಅಪಘಾತಪಡಿಸಿದ್ದು ಆ ಮೂಲಕ ಭಾ.ದಂ.ಸಂ.ಕಲಂ.279 ಐಪಿಸಿ ಅಡಿಯಲ್ಲಿ ದಂಡನಿಯವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುವಿರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀನು ಹುಡ್ಯೈ ವೆನ್ಯೂ ಕಾರ ನಂಬರ ಕೆಎ/28/ಜೆಡ್/4186 ನೇದ್ದನ್ನು ಅತೀ ವೇಗ ಅಥವಾ ದುಡುಕುತನದಿಂದ ನಡೆಸಿಕೊಂಡು ಬಂದು ಚಾ ಸಾ 4 ರವರಿಗೆ ಹಿಂದಿನಿಂದ ಬಂದು ಡಿಕ್ಕಿಪಡಿಸಿ ಬಲಗಾಲಿನ ಮೇಲೆ ಹಾಯಿಸಿದ್ದು ಸಾದಾ ಸ್ವರೂಪದ ಗಾಯ ಉಂಟುಪಡಿಸಿದ್ದರಿಂದ ಆ ಮೂಲಕ ಭಾ.ದಂ.ಸಂ.ಕಲಂ.337 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀನು ಚಲಾಯಿಸುತ್ತಿದ್ದ ಹುಡ್ಯೈ ವೆನ್ಯೂ ಕಾರ ನಂಬರ ಕೆಎ/28/ಜೆಡ್/4186 ನೇದ್ದನ್ನು ವಿಜಯಪೂರ ಕಡೆಯಿಂದ ಸಿಂದಗಿ ಕಡೆಗೆ ಅತೀವೇಗವಾಗಿ ಅಥವಾ ನಿಸ್ಕಾಳಜಿತನದಿಂದ ಮಾನವ ಜೀವಕ್ಕೆ ಅಪಾಯವಾಗುವ

ರೀತಿಯಿಂದ ನಡೆಸಿಕೊಂಡು ಬಂದು ಚಾ ಸಾ 4 ರವರಿಗೆ ಹಿಂದಿನಿಂದ ಬಂದು ಡಿಕ್ಕಿಪಡಿಸಿ ಬಲಗಾಲಿನ ಮೇಲೆ ಹಾಯಿಸಿದ್ದು ಬಲಗಾಲಿಗೆ ಭಾರಿ ಗಾಯ ಉಂಟುಪಡಿಸಿದ್ದರಿಂದ ಆ ಮೂಲಕ ಭಾ.ದಂ.ಸಂ.ಕಲಂ.338 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಆದ್ದರಿಂದ ಮೇಲಿನ ಆಪಾದನೆಗಳ ವಿಚಾರಣೆಯು ಈ ನ್ಯಾಯಾಲಯದಿಂದ ನಡೆಯತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ ಃ12-07-2023 ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯ
ಸ್ಥಳ ಃ ಸಿಂದಗಿ

**ಆಪಾದಿತರ ಹೇಳಿಕೆ**

ಪ್ರಶ್ನೆ 1 ಮೇಲಿನ ಆಪಾದನೆಯ ವಿವರವನ್ನು ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ತಿಳಿಯಿತೆ?

ಉತ್ತರಃ

ಪ್ರಶ್ನೆ 2 ಸದರಿ ಮೇಲಿನ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗಾಗಿ ಕ್ಲೇಮು ಮಾಡುವಿರೆ?

ಉತ್ತರ ಃ

**(ಈ ಮೇಲಿನ ಆರೋಪವನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಕೇಳಿ ಉತ್ತರ ಪಡೆದು ಸರಿ ವ ನಿಜ ಎಂದು ಪ್ರಮಾಣೀಕರಿಸುವೆನು).**

ಸ್ಥಳಃ ಸಿಂದಗಿ,
ದಿನಾಂಕಃ12-07-2023 ಜೆ. ಎಮ್. ಎಫ್.ಸಿ., ಸಿಂದಗಿ

**ಆಪಾದಿತನ ಸಹಿ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿಂದಗಿ**

**ಸಿ.ಸಿ.ನಂ.4804/2021**

**ಫಿರ್ಯಾದಿದಾರ ಃ** ಸರ್ಕಾರದ ಪರವಾಗಿ
ಸಿಂದಗಿ ಹಿಪ್ಪರಗಿ ಪೋಲೀಸ್‌ರು

**ವಿರುದ್ಧ**

**ಆರೋಪಿತರು ಃ** 1. ಅಲೋಕ ತಂದೆ ಬಾಬುರಾವ ರೆಡ್ಡಿ
ವಯಸ್ಸು ಃ 28 ವರ್ಷ ಉಃ ಚಾಲಕ
ಸಾಃ ಜೇವರಗಿ

- - -

**ಆರೋಪಣೆ**

ಶ್ರೀ.ಮಹಾಂತೇಶ ಭೂಸಗೋಳ., ಬಿ.ಎ. (ಲಾ) ಎಲ್ ಎಲ್ ಬಿ., **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿಂದಗಿ** ಆದ ನಾನು, ಈ ಮೂಲಕ

1. ಅಲೋಕ ತಂದೆ ಬಾಬುರಾವ ರೆಡ್ಡಿ
ವಯಸ್ಸು ಃ 28 ವರ್ಷ ಉಃ ಚಾಲಕ
ಸಾಃ ಜೇವರಗಿ

- - - -

**ಆರೋಪಿತನಾದ ನಿನ್ನ ಮೇಲೆ ಹೊರಿಸಲಾದ** ಆರೋಪಣೆ ಏನೆಂದರೆ ಃ

1. ದಿನಾಂಕ 01-04-2021 ರಂದು 14.45 ಗಂಟೆಗೆ ಆರೋಪಿಯಾದ ನೀನು ನಿನ್ನ ಕಾರ್ ನೊಂದಣಿ ಸಂಖ್ಯೆ ಕೆಎ/05/ಎಎಫ್/3048 ನೇದ್ದನ್ನು ನೀನು ಸಾರ್ವಜನಿಕ ರಸ್ತೆಯಾದ ಸಿಂದಗಿ ಶಹಾಪೂರ ಎಸ್ ಎಚ್ 16 ರಲ್ಲಿ ಸಿಂದಗಿ ಕಡೆಯಿಂದ ಯಂಕಂಚಿ ಕಡೆಗೆ ಅತೀ ಜೋರಾಗಿ ಅಥವಾ ನಿರ್ಲಕ್ಷ್ಯತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಎದುರಿಗೆ ಬರುತ್ತಿದ್ದ ಪಿರ್ಯಾದಿಯ ಮಗ ಆನಂದ ತಂದೆ ದ್ಯಾವಪ್ಪ ವಗ್ಗರ ಇತ ಚಲಾಯಿಸುತ್ತಿದ್ದ ಮೋಟಾರ್ ಸೈಕಲ್ ಸಂಖ್ಯೆ ಕೆಎ/28/ವಾಯ್ -8675 ಅದರ ಹಿಂಬದಿ ಸವಾರರಾದ ಚಾ ಸಾ 9 ಪ್ರಭು ಮತ್ತು 10 ಸಂತೋಷ ಇವರನ್ನು ಕೂಡಿಸಿಕೊಂಡು ಯಂಕಂಚಿಯಿಂದ ಸಿಂದಗಿ ಕಡೆಗೆ ಬರುತ್ತಿದ್ದಾಗ ನೀನು ಅತೀ ವೇಗ ಅಥವಾ ನಿರ್ಲಕ್ಷ್ಯತನದಿಂದ ಎದುರಿನ ಮೋಟಾರ್ ಸೈಕಲ್‌ಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ್ದು ಆ ಮೂಲಕ ಭಾ.ದಂ.ಸಂ.ಕಲಂ.279 ಐಪಿಸಿ ಅಡಿಯಲ್ಲಿ ದಂಡನಿಯವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುವಿರಿ.

2.	ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀನು ನಿನ್ನ ಕಾರ್ ಸಂಖ್ಯೆ ಕೆಎ/05/ಎಎಫ್/3048 ನೇದ್ದನ್ನು ಅತೀ ವೇಗ ಅಥವಾ ದುಡುಕುತನದಿಂದ ನಡೆಸಿಕೊಂಡು ಬಂದು ಎದುರಿಗೆ ಬರುತ್ತಿದ್ದ ಮೋಟಾರ್ ಸೈಕಲ್ ಕೆಎ/28/ವಾಯ್ -8675 ನೇದ್ದಕ್ಕೆ ಅಘಾತಪಡಿಸಿದ ಪರಿಣಾಮ ಚಾ ಸಾ 10 ರವರ ಹಣೆಯ ಮೇಲೆ, ಎಡಗೈ ಹಿಡಕಿಯ ಮೇಲೆ, ಎಡ ಗಲ್ಲಕ್ಕೆ ಎಡ ತೊಡೆಗೆ ಸಾದಾ ಸ್ವರೂಪದ ಗಾಯ ಉಂಟುಪಡಿಸಿದ್ದರಿಂದ ಆ ಮೂಲಕ ಭಾ.ದಂ.ಸಂ.ಕಲಂ.337 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

3.	ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀನು ಚಲಾಯಿಸುತ್ತಿದ್ದ ಟಾಟಾ ಕಂಪನಿಯ ಕ್ಯಾಂಟರ್ ನಂಬರ ಎಮ್ ಎಚ್ 4/ಜೆಕೆ-4976 ನೇದ್ದನ್ನು ಸಿಂದಗಿ ಕಡೆಯಿಂದ ದೇವರ ಹಿಪ್ಪರಗಿ ಕಡೆಗೆ ಅತೀವೇಗವಾಗಿ ಅಥವಾ ನಿಸ್ಕಾಳಜಿತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಿಂದ ನಡೆಸಿಕೊಂಡು ಬಂದು ಎದುರಿಗೆ ದೇವರ ಹಿಪ್ಪರಗಿ ಕಡೆಯಿಂದ ಸಿಂದಗಿ ಕಡೆಗೆ ಹೊರಟ ಮಹಿಂದ್ರಾ ಕಂಪಯ ಬುಲೇರೋ ಗೂಡ್ಸ ವಾಹನ ನಂಬರ ಕೆಎ 48/5530 ನೇದ್ದಕ್ಕೆ ಹಾಯಿಸಿ ಅಪಘಾತಪಡಿಸಿದ್ದರಿಂದ ಬುಲೇರೋ ಗೂಡ್ಸ ವಾಹನ ಚಾಲಕ ಪಿರ್ಯಾದಿಯ ತಮ್ಮ ಸುಭಾಸ ತಲೆಗೆ, ಎಡ ಹಣೆಯ ಮೇಲೆ, ಬಲ ಎದೆಗೆ, ಎಡಗೈ ಮುಷ್ಠಿ ಹತ್ತಿರ ತೊಡ್ಡು ಬೀಜಕ್ಕೆ, ಬಲ ತೊಡೆಗೆ ಭಾರಿ ಗಾಯ ಒಳಪೆಟ್ಟಾಗಿದ್ದು ಮತ್ತು ಬುಲೇರೋ ಗೂಡ್ಸದ್ದ ವಾಹನದಲ್ಲಿದ್ದ ಮೋಹನ ಇತನ ತಲೆಗೆ ಹಿಂದೆ, ಬಲಗೈ ರಟ್ಟೆಗೆ, ಮೊಳಕೈಗೆ ಎಡಗೆ ಹಿಡಿಕಿ ಹತ್ತಿರ ಭಾರಿ ಗಾಯ ಒಳಪೆಟ್ಟಾಗಿದ್ದು ಅಲ್ಲದೇ ಯಂಕಂಪ್ಪ ಇತನ ಎಡಕಣ್ಣಿನ ಹತ್ತಿರ ಎದೆಗೆ, ಹೊಟ್ಟೆಗೆ, ಎಡಬುಜಕ್ಕೆ, ಎಡ ಮೊಳಕಾಲ ಕೆಳಗೆ ಭಾರಿ ಗಾಯ ಉಂಟುಪಡಿಸಿದ್ದರಿಂದ ಆ ಮೂಲಕ ಭಾ.ದಂ.ಸಂ.ಕಲಂ.338 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿಆರೋಪಿತನಾದ ನೀನು ಚಲಾಯಿಸುತ್ತಿದ್ದ ಟಾಟಾ ಕಂಪನಿಯ ಕ್ಯಾಂಟರ್ ನಂಬರ ಎಮ್ ಎಚ್ 4/ಜೆಕೆ-4976 ನೇದ್ದನ್ನು ಸಿಂದಗಿ ಕಡೆಯಿಂದ ದೇವರ ಹಿಪ್ಪರಗಿ ಕಡೆಗೆ ಅತೀವೇಗವಾಗಿ ಅಥವಾ ನಿಸ್ಕಾಳಜಿತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಿಂದ ನಡೆಸಿಕೊಂಡು ಬಂದು ಎದುರಿಗೆ ದೇವರ ಹಿಪ್ಪರಗಿ ಕಡೆಯಿಂದ ಸಿಂದಗಿ ಕಡೆಗೆ ಹೊರಟ ಮಹಿಂದ್ರಾ ಕಂಪಯ ಬುಲೇರೋ ಗೂಡ್ಸ ವಾಹನ ನಂಬರ ಕೆಎ 48/5530 ನೇದ್ದಕ್ಕೆ ಹಾಯಿಸಿ ಅಪಘಾತಪಡಿಸಿದ್ದರಿಂದ ಬುಲೇರೋ ಗೂಡ್ಸ ವಾಹನ ಚಾಲಕ ಪಿರ್ಯಾದಿಯ ತಮ್ಮ ಸುಭಾಸ ತಲೆಗೆ, ಎಡ ಹಣೆಯ ಮೇಲೆ, ಬಲ ಎದೆಗೆ, ಎಡಗೈ ಮುಷ್ಠಿ ಹತ್ತಿರ ತೊಡ್ಡು ಬೀಜಕ್ಕೆ, ಬಲ ತೊಡೆಗೆ ಭಾರಿ ಗಾಯ ಒಳಪೆಟ್ಟಾಗಿದ್ದು ಮತ್ತು ಬುಲೇರೋ ಗೂಡ್ಸದ್ದ ವಾಹನದಲ್ಲಿದ್ದ ಮೋಹನ ಇತನ ತಲೆಗೆ ಹಿಂದೆ, ಬಲಗೈ ರಟ್ಟೆಗೆ, ಮೊಳಕೈಗೆ ಎಡಗೆ ಹಿಡಿಕಿ ಹತ್ತಿರ ಭಾರಿ ಗಾಯ ಒಳಪೆಟ್ಟಾಗಿದ್ದು ಅಲ್ಲದೇ ಯಂಕಂಪ್ಪ ಇತನ ಎಡಕಣ್ಣಿನ ಹತ್ತಿರ ಎದೆಗೆ, ಹೊಟ್ಟೆಗೆ, ಎಡಬುಜಕ್ಕೆ, ತರಚಿದ ಗಾಯ ಪೆಟ್ಟಾಗಿ ಮೂರು ಜನರು ಸ್ಥಳದಲ್ಲಿಯೇ ಮರಣ ಹೊಂದಿದ್ದು ಆ ಮೂಲಕ ಭಾ.ದಂ.ಸಂ.ಕಲಂ.304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀನು ಟಾಟಾ ಕಂಪನಿಯ ಕ್ಯಾಂಟರ ನಂಬರ ಎಮ್ ಎಚ್ 04/ಜೆಕೆ-4976 ಸ್ಥಳದಲ್ಲಿಯೇ ಬಿಟ್ಟು ಅಪಘಾತದ ಸಂಗತಿಯನ್ನು ಪೋಲಿಸ್ ಠಾಣೆಗೆ ತಿಳಿಸದೇ ಓಡಿ ಹೋಗಿ ಆ ಮೂಲಕ ಭಾರತೀಯ ಮೋಟಾರ್

ವಾಹನ ಅಧಿನಿಯಮ ಕಲಂ.187 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋ ಪ ಎಸಗಿರುವಿರಿ.

ಆದ್ದರಿಂದ ಮೇಲಿನ ಆಪಾದನೆಗಳ ವಿಚಾರಣೆಯು ಈ ನ್ಯಾಯಾಲಯದಿಂದ ನಡೆಯತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ :05-09-2022 ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯ

ಸಿಂದಗಿ

## ಆಪಾದಿತರ ಹೇಳಿಕೆ

ಪ್ರಶ್ನೆ 1 ಮೇಲಿನ ಆಪಾದನೆಯ ವಿವರವನ್ನು ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ತಿಳಿಯಿತೆ?

ಉತ್ತರಃ

ಪ್ರಶ್ನೆ 2 ಸದರಿ ಮೇಲಿನ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗಾಗಿ ಕ್ಲೇಮು ಮಾಡುವಿರೇ?

ಉತ್ತರ ಃ

(ಈ ಮೇಲಿನ ಆರೋಪವನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಕೇಳಿ ಉತ್ತರ ಪಡೆದು ಸರಿ ವ ನಿಜ ಎಂದು ಪ್ರಮಾಣೀಕರಿಸುವೆನು).

ಸ್ಥಳಃ ಸಿಂದಗಿ,
ದಿನಾಂಕಃ05-09-2022 ಜೆ. ಎಮ್. ಎಫ್.ಸಿ., ಸಿಂದಗಿ

**ಆಪಾದಿತನ ಸಹಿ**